# ಮೈಸೂರು ವಿಶ್ವವಿದ್ಯಾನಿಲಯ

Estd-1916
(Re-accredited by NAAC at "A" Grade with a CGPA of 3.01)
(overall Ranking 54th and University Ranking 33rd in NIRF Ranking-2022)

ಸಂಖ್ಯೆ: ಪ.ವಿ.8.4/ಯುಜಿ/NEP/87/2021-22

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005
ದಿನಾಂಕ: 27-01-2023

## ಸುತ್ತೋಲೆ

ವಿಷಯ: ಸ್ನಾತಕ ಪದವಿ ಪರಿಸರ ಅಧ್ಯಯನ ವಿಷಯದ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಬಗೆಗೆ.
ಉಲ್ಲೇಖ: ಡಾ. ಬಿ.ಎಸ್. ರವಿಕುಮಾರ್, ಅಧ್ಯಕ್ಷರು, ಪರಿಸರ ಅಧ್ಯಯನ ಪರೀಕ್ಷಾ ಮಂಡಳಿ, ಇವರ ಪತ್ರ ದಿನಾಂಕ: 18-01-2023.

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಪರಿಸರ ಅಧ್ಯಯನ ವಿಷಯದ ಈ ಹಿಂದಿನ ಉತ್ತರ ಪತ್ರಿಕೆಗಳನ್ನು ಕಾಲೇಜು ಹಂತದಲ್ಲೇ ಮೌಲ್ಯಮಾಪನ ಮಾಡಿಸಲಾಗಿತ್ತು. ಕ್ರೆಡಿಟ್‌ನಲ್ಲಿ ಬದಲಾವಣೆಯಾಗಿರುವುದರಿಂದ, ಹಾಗೂ ಗೌಪ್ಯತೆಯ ಹಿತದೃಷ್ಟಿಯಿಂದ ಫೆಬ್ರವರಿ/ಮಾರ್ಚ್-2023 ಪರೀಕ್ಷೆಯಿಂದ ಜಾರಿಗೆ ಬಂದಂತೆ, ಪರಿಸರ ಅಧ್ಯಯನ ಉತ್ತರಪತ್ರಿಕೆಗಳನ್ನು ಕೇಂದ್ರೀಯ ಮೌಲ್ಯಮಾಪನದ ವ್ಯವಸ್ಥೆಯೊಳಗೆ ಮೌಲ್ಯಮಾಪನ ಮಾಡಿಸಲು ತೀರ್ಮಾನಿಸಲಾಗಿದೆ.

ಆದುದರಿಂದ, ಪರಿಸರ ಅಧ್ಯಯನ ಪರೀಕ್ಷೆಯು ಮುಗಿದ ನಂತರ ಉತ್ತರಪತ್ರಿಕೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿಕೊಡಲು ಕ್ರಮವಹಿಸುವುದು, ಹಾಗೂ ಸದರಿ ಉತ್ತರಪತ್ರಿಕೆಗಳ ಕೇಂದ್ರೀಯ ಮೌಲ್ಯಮಾಪನಕ್ಕೆ ಅಧ್ಯಾಪಕರುಗಳನ್ನು ಕಳುಹಿಸಬೇಕೆಂದು ಸೂಚಿಸಲಾಗಿದೆ.

Gnana 31/1/23

ಕುಲಸಚಿವ (ಪರೀಕ್ಷಾಂಗ)

ಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರು / ಮುಖ್ಯಸ್ಥರುಗಳಿಗೆ.
2. ಡಾ. ಬಿ.ಎಸ್. ರವಿಕುಮಾರ್, ಅಧ್ಯಕ್ಷರು, ಪರಿಸರ ಅಧ್ಯಯನ ಪರೀಕ್ಷಾ ಮಂಡಳಿ, ಎ.ವಿ.ಕೆ. ಮಹಿಳಾ ಕಾಲೇಜು, ಹಾಸನ- ಸುತ್ತೋಲೆಯಲ್ಲಿ ಕಾಣಿಸಿರುವಂತೆ ಕ್ರಮವಹಿಸುವುದು.
3. ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಮಾನ್ಯ ಕುಲಪತಿಗಳ / ಕುಲಸಚಿವರ / ಕುಲಸಚಿವ(ಪರೀಕ್ಷಾಂಗ) ಇವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕಛೇರಿ ಪ್ರತಿ.